ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 155-159
Bi-Monthly, Peer-Reviewed, Open Access, Indexed Journal

I S S N: 2583-3510

SIRDF JOURNALS
editor@srujani.in
www.srujani.in

ಮಹಾಕಾವ್ಯಗಳಲ್ಲಿ ಸ್ತ್ರೀ

ಡಾ. ರುಕ್ಮಿಣಿ ಹೆಚ್. ಎಸ್
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು

Abstract:

ಈ ಲೇಖನವು ಭಾರತೀಯ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳಲ್ಲಿ ಚಿತ್ರಿತವಾಗಿರುವ ಸ್ತ್ರೀಪಾತ್ರಗಳ ಸ್ಥಾನಮಾನ, ವ್ಯಕ್ತಿತ್ವ ಹಾಗೂ ಸಾಮಾಜಿಕ ಸ್ಥಿತಿಗತಿಗಳನ್ನು ವಿಶ್ಲೇಷಿಸುತ್ತದೆ. ರಾಮಾಯಣದಲ್ಲಿ ಸೀತೆ, ಊರ್ಮಿಳೆ, ಕೈಕೆ, ಮಂಥರೆ ಮತ್ತು ಮಂಡೋದರಿಯಂತಹ ಪಾತ್ರಗಳ ಮೂಲಕ ಸ್ತ್ರೀಯರ ತ್ಯಾಗ, ಪತಿಭಕ್ತಿ, ವಿಧೇಯತೆ ಹಾಗೂ ಪುರುಷಪ್ರಧಾನ ವ್ಯವಸ್ಥೆಯಿಂದ ಉಂಟಾದ ಶೋಷಣೆಯನ್ನು ಗುರುತಿಸಲಾಗಿದೆ. ಮಹಾಭಾರತದಲ್ಲಿ ಕುಂತಿ, ಗಾಂಧಾರಿ, ದ್ರೌಪದಿ, ಅಂಬಿಕೆ, ಅಂಬಾಲಿಕೆ ಮತ್ತು ಮಾದ್ರಿಯಂತಹ ಸ್ತ್ರೀಪಾತ್ರಗಳ ಬದುಕಿನ ಮೂಲಕ ಸ್ತ್ರೀಯರ ಸ್ವಾಭಿಮಾನ, ಪ್ರತಿಭಟನೆ, ಅಸಹಾಯಕತೆ ಹಾಗೂ ಸಾಮಾಜಿಕ ನಿರ್ಬಂಧಗಳನ್ನು ಚರ್ಚಿಸಲಾಗಿದೆ. ವಿಶೇಷವಾಗಿ ದ್ರೌಪದಿಯ ಪ್ರತಿಭಟನಾತ್ಮಕ ವ್ಯಕ್ತಿತ್ವ ಮತ್ತು ಸೀತೆಯ ಅಗ್ನಿಪರೀಕ್ಷೆಯಂತಹ ಪ್ರಸಂಗಗಳನ್ನು ಆಧರಿಸಿ ಮಹಾಕಾವ್ಯಗಳಲ್ಲಿ ಪ್ರತಿಬಿಂಬಿತವಾಗಿರುವ ಪುರುಷಪ್ರಧಾನ ಸಾಮಾಜಿಕ ಮೌಲ್ಯಗಳನ್ನು ವಿಮರ್ಶಿಸಲಾಗಿದೆ. ಒಟ್ಟಾರೆಯಾಗಿ, ಭಾರತೀಯ ಮಹಾಕಾವ್ಯಗಳು ಸ್ತ್ರೀಯರನ್ನು ತ್ಯಾಗಮೂರ್ತಿ ಹಾಗೂ ಗೌರವದ ಸಂಕೇತಗಳಾಗಿ ಚಿತ್ರಿಸುವುದರ ಜೊತೆಗೆ, ಅವರ ಸ್ವಾತಂತ್ರ್ಯ ಮತ್ತು ಅಸ್ತಿತ್ವವನ್ನು ನಿಯಂತ್ರಿಸುವ ಸಾಮಾಜಿಕ ವ್ಯವಸ್ಥೆಯನ್ನೂ ಅನಾವರಣಗೊಳಿಸುತ್ತವೆ ಎಂಬುದನ್ನು ಲೇಖನವು ಪ್ರತಿಪಾದಿಸುತ್ತದೆ.

Keywords: *ಭಾರತೀಯ ಮಹಾಕಾವ್ಯಗಳು, ಸ್ತ್ರೀ ಸಂವೇದನೆ, ಪುರುಷಪ್ರಧಾನ ವ್ಯವಸ್ಥೆ, ಸ್ತ್ರೀ ಶೋಷಣೆ, ಪ್ರತಿಭಟನಾತ್ಮಕ ವ್ಯಕ್ತಿತ್ವ.*

ಪೀಠಿಕೆ

ಕನ್ನಡ ಸಾಹಿತ್ಯ ಚರಿತ್ರೆಯು ತನ್ನದೇಯಾದ ವೈಶಿಷ್ಟ್ಯಪೂರ್ಣ ಸಾಹಿತ್ಯಿಕ ಹಿನ್ನೆಲೆಯನ್ನು ಒಳಗೊಂಡಿದೆ. ಹಲವಾರು ಶ್ರೇಷ್ಠಾತಿಶ್ರೇಷ್ಠ ಕೃತಿಗಳ ಹುಟ್ಟನ್ನು ಕನ್ನಡ ಸಾಹಿತ್ಯವನ್ನು ಅವಲೋಕಿಸಿದಾಗ ಕಾಣಬಹುದು. ಭಾರತೀಯ ಸಂಸ್ಕೃತಿಯ ಪ್ರತೀಕವೆಂಬಂತ ಹಲವಾರು ಕೃತಿಗಳು ತಮ್ಮದೇಯಾದ ವಸ್ತು ವಿಶಿಷ್ಟತೆ ಮೂಲಕ ಸಮಾಜಕ್ಕೆ ಅತ್ಯದ್ಭುತ ಕೊಡುಗೆಗಳೆಂಬಂತೆ ನಿರೂಪಿತವಾಗಿರುವು ದನ್ನು ಕಾಣುತ್ತೇವೆ. ಇಂತಹ ಅತ್ಯದ್ಭತ ಸಾಹಿತ್ಯ ಸೃಷ್ಟಿಯೊಳಗೆ ಸ್ತ್ರೀ ಕೆಲವೊಮ್ಮೆ ವೈಭವದ ತುತ್ತ ತುದಿಗೇರಿ ವಿಜೃಂಭಿಸಿದರೆ, ಕೆಲವೊಮ್ಮೆ ಪಾತಾಳದ ಅಂತರ್ ನಾದದಂತೆ ಸ್ತ್ರೀ ಗೋಚರಿಸುತ್ತಾಳೆ. ಸೃಷ್ಟಿಯ ಎಲ್ಲಾ ಕೊಡುಗೆಗಳಿಗೂ ಸ್ತ್ರೀ ನಾಮದೇಯವನ್ನು ನೀಡಿ ಗೌರವಿಸಿದ ಸಮಾಜವೇ ಸ್ತ್ರೀ ಶೋಷಣೆಗೆ ಮುಂದಾದ ಎಷ್ಟೋ ಸಂದರ್ಭ ಸನ್ನಿವೇಶಗಳನ್ನು ನೋಡಬಹುದಾಗಿದೆ.

ಭಾರತೀಯರ ಮನದಾಳದಲ್ಲಿ ಪೂಜ್ಯನೀಯ ಸ್ಥಾನವನ್ನಲಂಕರಿಸಿ ಇಂದಿಗೂ ತನ್ನ ಅಸ್ಥಿತ್ವವನ್ನು

Please cite this article as: ರುಕ್ಮಿಣಿ, ಹೆಚ್.ಎಸ್. (2026). ಮಹಾಕಾವ್ಯಗಳಲ್ಲಿ ಸ್ತ್ರೀ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(3), 155–159

ಉಳಿಸಿಕೊಂಡು ಬಂದಿರುವ ಧಾರ್ಮಿಕ ಗ್ರಂಥಗಳೆಂದರೆ ಅವು 'ರಾಮಾಯಣ' ಹಾಗೂ 'ಮಹಾಭಾರತ' ಎಂಬ ಮಹಾಕಾವ್ಯಗಳು. ಇಂದಿನ ನಾಗರೀಕ ಸಮಾಜದ ಪ್ರತಿಯೊಂದು ಹೆಜ್ಜೆ ಗುರುತಿನ ಹಿನ್ನೆಲೆಯನ್ನು ನಾವು ಈ ರಾಮಾಯಣ ಮತ್ತು ಮಹಾಭಾರತವೆಂಬ ಮಹಾಕಾವ್ಯಗಳಲ್ಲಿ ಕಾಣಬಹುದು. ರಾಮಾಯಣವನ್ನು ವಾಲ್ಮೀಕಿ ಮಹರ್ಷಿಯು ಮಹಾಭಾರತವನ್ನು ವ್ಯಾಸ ಮಹರ್ಷಿಯೂ ರಚಿಸಿದರೆಂಬ ಪ್ರತೀತಿ. ಇದೆ ಶ್ರೇಷ್ಠ ಮುನಿವರ್ಯರ ಆ ಮಹಾನ್ ಧಾರ್ಮಿಕ ಕೃತಿಗಳಿಂದ ಪ್ರಭಾವಿತರಾದ ಕನ್ನಡದ ಹಲವಾರು ಕವಿಗಳು ಕುಮಾರ ವಾಲ್ಮೀಕಿ, ಲಕ್ಷ್ಮೀಶ, ಕುಮಾರ ವ್ಯಾಸ, ರನ್ನ, ಪಂಪ ಮುಂತಾದವರು ತಮ್ಮದೇಯಾದ ಕವಿತಾ ಪ್ರೌಢಿಮೆಯನ್ನು ಆಧರಿಸಿ ಮೂಲ ರಾಮಾಯಣ ಮತ್ತು ಮಹಾಭಾರತದ ಆಶಯಗಳಿಗೆ ದಕ್ಕೆ ಬರದಂತೆ ತಮ್ಮ ಕೃತಿ ನಿರೂಪಣೆ ಮಾಡಿದರು. ಅಂತೆಯೇ ತೊರವೆಯ ರಾಮಾಯಣ, ಜೈಮಿನಿ ಭಾರತ, ಗದುಗಿನ ಭಾರತ, ಗದಾಯುದ್ಧ, ವಿಕ್ರಮಾರ್ಜುನ ವಿಜಯ... ಮುಂತಾದ ಕೃತಿಗಳು ರಚಿಸಲ್ಪಟ್ಟವು.

ವೇದೋಪನಿಷತ್ತಿನ ಕಾಲದ ತರುವಾಯ ಪಿತೃಪ್ರಧಾನ ವ್ಯವಸ್ಥೆ ಸಮಾಜದ ಭದ್ರ ಬುನಾದಿಯಾಗಿ ಮಾರ್ಪಟು ಹೊಂದಿತು. ಹೆಣ್ಣು ಸಂಸಾರದ ಕಣ್ಣೆಂದು ಹೇಳುತ್ತಿದ್ದ ಅಂದಿನ ಸಮಾಜವೇ ಹೆಣ್ಣು ಗಂಡಿನ ಸುಖಕ್ಕಾಗಿ ಜೀವಿಸಬೇಕಾದ ಜೀವಿ ಎಂದು ಹಲವಾರು ಸಂದಂರ್ಭಗಳನ್ನು ಸೃಷ್ಟಿಸಿತು. ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀ ತಪ್ಪಿತಸ್ಥಳಲ್ಲದಿದ್ದರೂ, ಶಿಕ್ಷೆಗೊಳಗಾಗುವ ಅನಿವಾರ್ಯ ಪರಿಸ್ಥಿತಿ ತಲೆ ಎತ್ತಿದವು. ಉದಾ: ರಾಮಾಯಣದಲ್ಲಿಯ ಸೀತೆ. ಸೀತೆ ಬದುಕಿನುದ್ದಕ್ಕೂ ನೋವಿನ ಸಾರವನ್ನು ಉಂಡವಳೆ. ಮದುವೆಯಾದ ಕೆಲವೇ ತಿಂಗಳುಗಳಲ್ಲಿ ಗಂಡನನ್ನುನುಸರಿಸಬೇಕೆಂಬ ಪತಿಭಕ್ತಿಯಾಧಾರದ ಮೇಲೆ ಪತಿಯೊಟ್ಟಿಗೆ ವನವಾಸಕ್ಕೆ ಅಣಿಯಾಗುತ್ತಾಳೆ. ಅಂತೆಯೇ ರಾಮನೊಟ್ಟಿಗೆ ಕಷ್ಟ–ಸುಖಗಳಲ್ಲಿ ಸಮಪಾಲುದಾರಳಾಗಿ ಸುಖಿ ಸಂಸಾರದ ಕನಸನ್ನು ಕಾಣುತ್ತಾಳೆ. ದುರಾದೃಷ್ಟವೂ ಅಥವ ಅವಳ ಮಾತಿನಂತೆಯೇ ಹೆಣ್ಣಾಗಿ ಹುಟ್ಟಿದ ತಪ್ಪಿಗಾಗಿಯೂ ರಾವಣನ ಕೆಟ್ಟ ದೃಷ್ಟಿಗೆ ಬಲಿಯಾಗುತ್ತಾಳೆ. ಮುಂದುವರಿದು ರಾಮ–ರಾವಣರ ಯುದ್ಧ ಸೀತೆಯ ಸಮಾಗಮ. ಸೀತೆಯ ಕಷ್ಟದ ದಿನಗಳು ಇಲ್ಲಿಗೆ ಮುಗಿಯುವುದಿಲ್ಲ. ಲೋಕ ಮಾತೆಯೆನಿಸಿದ ಸೀತೆಗೆ ಶೋಕ ಸಾಗರವೇ? ಎದುರು ಕಾಯುತ್ತಿತ್ತು. ಸೀತೆಯ ಪಾತಿವ್ರತ್ಯದ ಬಗೆಗೆ ಅನುಮಾನಗೊಂಡ ರಾಮ ಸೀತೆಯನ್ನು ಅಗ್ನಿ ಪ್ರವೇಶಕ್ಕೆ ಒಳಗು ಮಾಡುತ್ತಾನೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಪುರುಷ (ಅಗ್ನಿದೇವ)ನೇ ಸ್ತ್ರೀ ಪಾವಿತ್ರತೆಯನ್ನು ಪ್ರಮಾಣೀಕರಿಸುವುದು. ಪುರುಷ ಪ್ರಾಧಾನ್ಯತೆಗೆ ಈ ಸಂದರ್ಭ ಕನ್ನಡಿ ಹಿಡಿದಂತಿದೆ. ಅಗ್ನಿದೇವನ ಪಾವಿತ್ರತೆಯ ಪ್ರಮಾಣ ಪತ್ರ ದೊರೆತ ನಂತರ ರಾಮ–ಸೀತೆಯ ಮಿಲನವಾಗುತ್ತದೆ. ಅಗಸನೋರ್ವನ ಮಾತಿನಿಂದಾಗಿ ಮತ್ತೆ ಸೀತಾಮಾತೆಯ ಶೋಷಣೆ. ಭಾರತೀಯ ಮನದಾಳದಲ್ಲಿ ದೈವೀ ಮನೋಸ್ಥಾನವನ್ನಲಂಕರಿಸಿರುವ ರಾಮ ಸೀತಾದೇವಿಯ ವಿಷಯದಲ್ಲಿ ನಡೆದುಕೊಂಡದ್ದಾದರು ಏನು? ರಾಮ ಸೀತಾದೇವಿಯ ವಿಷಯದಲ್ಲಿ ತೆಗೆದುಕೊಂಡ ನಿರ್ಧಾರಗಳಾದರೂ ಎಷ್ಟರ ಮಟ್ಟಿಗೆ ಸರಿ? ಈ ಮಾತುಗಳು ವಿಚಾರಾರ್ಹವೆನಿಸುತ್ತವೆ.

ಈ ರಾಮಾಯಣದಲ್ಲಿ ಬರುವ ಪ್ರತಿಯೊಂದು ಸ್ತ್ರೀ ಪಾತ್ರಗಳು ಒಂದಲ್ಲ ಒಂದು ರೀತಿ ಶೋಷಣೆಗೊಳಗಾದಂತೆ ದುಃಖಿತ ಪಾತ್ರಗಳೇ ಆಗಿವೆ. ಇದಕ್ಕೆ ಊರ್ಮಿಳೆ ಪಾತ್ರ ಚಿತ್ರಣ ನೀಡಬಹುದು. ಮದುವೆಯಾಗಿ ಸುಖ–ಸಂಸಾರದ ಕನಸುಗಳನ್ನೊತ್ತು ಗಂಡನ ಮನೆಗೆ ಆಗಮಿಸಿದ ಊರ್ಮಿಳೆಯ ಬಾಳಲ್ಲಿ ರಾಮನ ವನವಾಸ ಸಂಗತಿ ಬರಸಿಡಿಲೆರಗಿದಂತಾಗುತ್ತದೆ. ಪತಿಯ(ಲಕ್ಷ್ಮಣ) ಮನದಾಳದಲ್ಲಿನ ಅಣ್ಣನ ಪ್ರೇಮವನ್ನು ಮನಃಪೂರ್ವಕವಾಗಿ ತಾನು ಒಪ್ಪಿಕೊಳ್ಳುತ್ತಾಳೆ.

ಗಂಡನ ಮನಸ್ಸನ್ನು ಊರ್ಮಿಳೆ ಮಾತ್ರ ಅರ್ಥಮಾಡಿಕೊಂಡು ನಡೆದದ್ದು. ಆದರೆ ಲಕ್ಷ್ಮಣ? ಲಕ್ಷ್ಮಣನಿಗೆ ರಾಮಧ್ಯಾನವನ್ನುಳಿದು ಬೇರೇನೂ ಗೊತ್ತಿರಲಿಲ್ಲ. ತನ್ನನ್ನು ನಂಬಿ ಬಂದ ಹೆಣ್ಣಿನ ಬಗ್ಗೆ ಕ್ವಚಿತ್ತಾದರೂ, ಕರುಣೆ ತೋರಿ ಅವಳೊಟ್ಟಿಗೆ ಸಾಂಸಾರಿಕ ಸುಖ–ದುಃಖದಲ್ಲಿ ಪಾಲ್ಗೊಳ್ಳಬೇಕಿತ್ತು. ಆದರೆ ಲಕ್ಷ್ಮಣನಿಗೆ ಊರ್ಮಿಳೆಗಿಂತ ರಾಮ ಮುಖ್ಯನಾಗುತ್ತಾನೆ. ಇಲ್ಲಿ ಪುರುಷಪ್ರಧಾನ್ಯತೆಯನ್ನು ಗುರುತಿಸಬಹುದು. ಹೆಂಡತಿಯಾದವಳು ಗಂಡನ ಅರ್ಧಭಾಗವೆಂದು ಹೇಳುವ ಸಂಸ್ಕೃತಿಯೇ ಈ ರೀತಿ ಪುರುಷ ಪ್ರಾಧಾನತೆಯ ಕಡೆಗೆ ಸ್ವಾರ್ಥಪರತೆಯ ಭಾವನೆಯನ್ನು ವ್ಯಕ್ತಪಡಿಸಿರುವಾಗ ಸ್ತ್ರೀ ಸ್ಥಾನ ವ್ಯವಸ್ಥಿತವಾಗುವುದಾದರು ಹೇಗೆ? ರಾಮಾಯಣದ ಸೀತೆಗೆ ಅಂದಿನ ರಾಮ ಅಗ್ನಿ ಪರೀಕ್ಷೆ ನಡಿಸಿದಂತೆ ಇಂದಿನ ಸಮಾಜದ ಪುರುಷರು ತಮ್ಮ ಪತ್ನಿಯರಿಗೆ ಅಗ್ನಿ ಸ್ಪರ್ಶ ಮಾಡುತ್ತಿದ್ದಾರೆ. ಇದು ಮೂಲ ಧರ್ಮಗ್ರಂಥದ ಪಾಲನೆ ಎಂದರೆ ತಪ್ಪಾಗಲಾರದು. ಸೀತೆಯ ದುಃಖ ಅಂತ್ಯವಾದದ್ದು ಕೊನೆಗೂ ರಾಮನಿಂದಲ್ಲ. ತನ್ನ ಮಗಳ ಆರ್ತನಾದದ ಕಣ್ಣೀರಿನ ಬದುಕನ್ನು ಕಂಡು ಬೇಸತ್ತ ಭೂದೇವಿ ಬಾಯ್ತೆರೆದಾಗ. ವಿಚಿತ್ರವೆಂದರೆ ಸ್ತ್ರೀ ಮಮತಾಮಯಿ ಲೋಕಮಾತೆ, ಕರುಣಾಮೂರ್ತಿ, ದೇವತೆ ಹಾಗೆ–ಹೀಗೆ ಎನ್ನುತ್ತಾ ಅವಳನ್ನು ವೈಭವೀಕರಿಸಿ ಅವಳ ವ್ಯಕ್ತಿತ್ವ ಅಸ್ಥಿತ್ವವನ್ನೆ ದಮನ ಮಾಡಿದ ರೀತಿ ಪುರಾಣ ಪುಣ್ಯಕತೆಗಳಲ್ಲಿ ಕಾಣಬಹುದು.

ರಾಮಾಯಣವೆಂಬ ಮಾಹಾಕಾವ್ಯವು ತ್ಯಾಗಿ ಕರುಣಾಮೂರ್ತಿ ಸೀತೆಯ ಪಾತ್ರವಿಶಿಷ್ಟತೆಯನ್ನು ವಿವರಿಸುವುದರ ಜೊತೆಗೆ ಮತ್ತೊಂದೆಡೆ ದುಷ್ಟ ಕುಟಿಲೆ ಮಂಥರೆ, ಕೈಕೆಯಂತಹ ಪಾತ್ರ ವಿಶ್ಲೇಷಣೆಯನ್ನು ಮಾಡುತ್ತದೆ. ಮಂಥರೆ ಇಡೀ ರಾಮಾಯಣದ ಕಥೆಗೆ ಮೂಲ. ಇವಳಿಂದಾಗಿಯೆ ರಾಮನ ವನವಾಸ ಸೀತಾದೇವಿಯ ಅಗ್ನಿ ಪ್ರವೇಶ. ಇವಳ ಕುರುಡು ಪ್ರೇಮದ ಪರಿಣಾಮವಾಗಿ ದಸರಥನ ಮುದ್ದಿನ ಕಿರಿಯ ಮಡದಿ ಕೈಕೆ ಸ್ವಾರ್ಥಿಯಾಗುತ್ತಾಳೆ. ಭರತನ ಪ್ರೇಮದಲ್ಲಿ ಕಟ್ಟುಬಿದ್ದು ರಾಮನ ವನವಾಸಕ್ಕೆ ಕೈಕೆ ಪ್ರತ್ಯಕ್ಷವಾಗಿ ಕಾರಣವಾದರೆ ಪರೋಕ್ಷವಾಗಿ ಮಂಥರೆ ಕಾರಣವಾಗುತ್ತಾಳೆ. ದಶರಥ ಮಹಾರಾಜನ ಮತ್ತಿಬ್ಬರು ಮಡದಿಯರಾದ ಕೌಶಲ್ಯ ಮತ್ತು ಸುಮಿತ್ರೆಯರು ತಾಯ್ತನದ ಪ್ರತೀಕಗಳಾಗಿ ಸೃಷ್ಟಿಯಾಗಿದ್ದಾರೆ. ರಾಮಾಯಣದಲ್ಲಿ ನೆನೆಯಲೇಬೇಕಾದ ಮತ್ತೊಂದು ಪಾತ್ರ ಮಂಡೋದರಿ. ನಮ್ಮ ಪಂಚಪತಿವ್ರತೆಯರಲ್ಲಿ ಮಂಡೋದರಿಗೂ ಸ್ಥಾನವಿದೆ. ಪತಿ ರಾವಣ ಎಷ್ಟೇ ದುಷ್ಟನಾದರೂ ಪತಿಪ್ರೇಮವೇ ಪರಮ ಸುಖಿ ಜೀವನವೆಂದು ನಂಬಿ ರಾವಣನ್ನು ಆರಾಧಿಸಿದ ದೈವತಾ ಸ್ವರೂಪಿ. ಸೀತಾಮಾತೆಯ ಬಗೆಗೆ ಅಪಾರ ಗೌರವಾಧಾರಗಳನ್ನು ಹೊಂದಿದಾಕೆ. ಇವಳೂ ಸಹಾ ಪುರುಷಾಧಿನಳೆ. ತನ್ನ ಪತಿಯ ನೆಡವಳಿಕೆಗಳನ್ನು ಇಲ್ಲಿಯೂ ಪ್ರಶ್ನಿಸುವುದಿಲ್ಲ. ಬದಲಿಗೆ ಮೌನಿಯಾಗಿ ದೇವರಲ್ಲಿ ತನ್ನ ಮೊರೆಯಿಡುತ್ತಾಳೆ.

ಇನ್ನು ದಾಯಾದಿ ಕಲಹವನ್ನು ವಸ್ತುವನ್ನಾಗುಳ್ಳ ಮಹಾಭಾರತದ ಸ್ತ್ರೀ ಚಿತ್ರಣವನ್ನು ಕುರಿತು ವಿಶ್ಲೇಷಿಸುವುದಾದರೆ ಮಹಾಭಾರತದ ಸ್ತ್ರೀ ಪಾತ್ರಗಳು ರಾಮಾಯಣದ ಸ್ತ್ರೀ ಯರಂತೆ ಮೌನಿಗಳಲ್ಲ. ಪ್ರತಿಭಟನಾತ್ಮಕ ವ್ಯಕ್ತಿತ್ವವುಳ್ಳತವರು. ಈ ಮಹಾಕಾವ್ಯದಲ್ಲಿ ಕಾಣಸಿಗುವ ಮತ್ಸಗಂಧಿ (ಯೋಜನಾಗಂಧಿ), ಕುಂತಿ, ಮಾದ್ರಿ, ಗಾಂಧಾರಿ, ಅಂಬೆ, ಅಂಬಿಕೆ, ಅಂಬಾಲಿಕೆ, ದ್ರೌಪದಿ, ಅನುಸೂಯೆ, ಊರ್ವಶಿ, ಮೇನಕೆ ರೇಣುಕಾದೇವಿ ಮುಂತಾದ ಸ್ತ್ರೀ ಪಾತ್ರಗಳೆಲ್ಲವೂ ಪುರುಷ ನಿಯಂತ್ರಿತ ಪಾತ್ರಗಳಾದರೂ ತಮ್ಮ ಸ್ವಾಭಿಮಾನಕ್ಕೆ ಧಕ್ಕೆವುಂಟಾದಾಗ ಕೆಲವೊಂದು ಪಾತ್ರಗಳು ಸಿಡಿದೆದ್ದಿರುವುದನ್ನು ಕಾಣಬಹುದು.

ಪ್ರಾಚೀನ ಮಹಾಕಾವ್ಯಗಳ ಈ ಕಾಲಘಟ್ಟದಲ್ಲಿ ವಿಧವೆಯರ ಜೀವನ ವೇದೋತ್ತರದ ಜೀವನದಷ್ಟು ನಿಕೃಷ್ಟವಾಗಿಲ್ಲ. ಇಲ್ಲಿನ ವಿಧವೆಯರು ಪತಿಯ ಮರಣಾನಂತರವೂ ಸಮಾಜ ಜೀವಿಯಾಗಿ ಬಾಳಿ ಬದುಕಿರುವುದನ್ನು ಕಾಣುತ್ತೇವೆ. ಉದಾ– ಮತ್ಸಗಂಧಿ,

ಕುಂತಿ, ಅಂಬಿಕೆ, ಅಂಬಾಲಿಕೆ ಮುಂತಾದ ವಿಧವೆಯರು ಮಕ್ಕಳ ಪಾಲನೆ ಪೋಷಣೆಯಲ್ಲಿ ತಮ್ಮ ಬದುಕಿನ ಸುಖ–ಸಂತೋಷಗಳನ್ನು ಕಾಣಬಯಸುತ್ತಾರೆ. ಸ್ತ್ರೀ ಸತಿಸಹಗಮನ ಪದ್ಧತಿಯನ್ನು ಅನುಸರಿಸಿ ಚಿತೆ ಏರುವ ಪದ್ಧತಿ ರೂಢಿಯಲ್ಲಿರಲಿಲ್ಲ. ಇಡೀ ಮಹಾಭಾರತದ ಕಥಾಭಾಗದೊಳಗೆ "ಮಾದ್ರಿ" ಸಹಗಮನ ಬಿಟ್ಟರೆ ಉಳಿದಂತೆ ಎಲ್ಲಿಯೂ ಸಹಗಮನ ಪದ್ಧತಿಯು ಜರುಗಿದಂತೆ ಕಾಣಬರುವುದಿಲ್ಲ. "ಶಿಷ್ಟ ಪರಿಶಿಷ್ಟ ಸಂಸ್ಕೃತಿಗಳ ತಿಕ್ಕಾಟದ ಸನ್ನಿವೇಶದಲ್ಲಿ ಮಹಾಭಾರತ ರಚನೆ ಯಾಯಿತು. ಶಿಷ್ಟ ಸಂಸ್ಕೃತಿಯ ವಿಜಯದ ಚಿಹ್ನೆಯಾಗಿ ಮಾದ್ರಿ ಚಿತೆ ಏರಿದರೆ ಬುಟಕಟ್ಟು ಸಂಸ್ಕೃತಿಯ ಹೋರಾಟದ ಫಲವಾಗಿ ಕುಂತಿ ಮುಂತಾದವರು ಉಳಿದು ಬದುಕುತ್ತಾರೆ."[1]

ಈ ಮಹಾಕಾವ್ಯದಲ್ಲಿ ಕಾಣಸಿಗುವ ಸ್ತ್ರೀ ಪಾತ್ರಗಳೆಲ್ಲವೂ ಪ್ರತಿಭಟನಾ ಸ್ವರೂಪದ ಸ್ತ್ರೀ ಪಾತ್ರಗಳಲ್ಲ. ಪುರುಷನ ದಬ್ಬಾಳಿಕೆಗೆ, ಸಮಾಜದ ಕಟ್ಟುಪಾಡುಗಳಿಗೆ ಬಲಿಯಾದಂತ ಎಷ್ಟೋ ಪಾತ್ರ ಸೃಷ್ಟಿ ಮಹಾಭಾರತದಲ್ಲಿದೆ. ಅನಸೂಯ, ಅಹಲ್ಯ, ರೇಣುಕಾ, ಊರ್ವಶಿ, ಮೇನಕೆ ಮುಂತಾದವರನ್ನ ಮೇಲಿನ ಮಾತಿಗೆ ಉದಾಹರಿಸಬಹುದು. ಅಂತೆಯೇ ಪ್ರತಿಭಟನಾತ್ಮಕ ವ್ಯಕ್ತಿತ್ವವುಳ್ಳ

ಸ್ತ್ರೀಯಾಗಿ ಚಿತ್ರಿತವಾದ ಪಾತ್ರಗಳಲ್ಲಿ 'ದ್ರೌಪದಿ'ಯ ಹೆಸರನ್ನು ಮೊದಲಿಗೆ ಉಲ್ಲೇಖಿಸಬಹುದು. ಐದು ಜನ ಪಾಂಡವರ ಪತ್ನಿಯಾಗಿ ಮೆರೆದ ದ್ರೌಪದಿ ಪ್ರತೀಕಾರದ ಜ್ವಾಲಾಮುಖಿಯಂತೆ ಚಿತ್ರಿತಳಾಗಿದ್ದಾಳೆ. ಪುರುಷ ಸಮಾಜದ ನೀತಿ–ನಿಯಮಗಳನ್ನು ಪ್ರಶ್ನಿಸುವ ಧೀರ ವನಿತೆಯಾಗಿದ್ದಾಳೆ. ಧರ್ಮರಾಯ ಪಣದಲ್ಲಿ ದ್ರೌಪದಿಯನ್ನು ಸೋತು ದ್ರೌಪದಿಯನ್ನು ದುರ್ಯೋಧನನಿಗೆ ಒಪ್ಪಿಸುತ್ತಾನೆ. ಸಭೆಯ ನಡುಭಾಗದಲ್ಲಿ ದುಶ್ಯಾಸನನು ದ್ರೌಪದಿಯ ಸೀರೆ ಸೆಳೆವಾಗ ಕುಪಿತಳಾದ ದ್ರೌಪದಿ "ಪತಿಗಳೆನ್ನನು ಮಾರಿ ಧರ್ಮ ಸ್ಥಿತಿಯ ಕೊಂಡರು" ಹಾಗೆಯೇ ಪಾಂಡವರಿಗೆ "ಗಂಡರೋ ನೀವ್ ಭಂಡರೋ" ಎಂದು ಪ್ರಶ್ನಿಸಿದ ದಿಟ್ಟ ಮಹಿಳೆಯಾಗಿದ್ದಾಳೆ. ಅವಮಾನಿತಳಾದ ದ್ರೌಪದಿ ಮುಡಿಯಿಡಿದೆಳೆಯಲು ಕಾರಣನಾದ ದುರ್ಯೋಧನನ ತೊಡೆ ಮುರಿಸಿದಲ್ಲದೆ ಹರಡಿರುವ ತನ್ನ ಮುಡಿಯನ್ನು ಕಟ್ಟುವುದಿಲ್ಲವೆಂದು ಶಪತ ಮಾಡುತ್ತಾಳೆ. ಆ ಶಪತ ಈಡೇರಿಸುವ ಉದ್ದೇಶದಿಂದಾಗಿ ರಾಜಕೀಯ ಕುತಂತ್ರಗಳಲ್ಲೂ ತನ್ನ ಚಾಣಕ್ಯತನವನ್ನು ತೋರುತ್ತಾಳೆ. ಧರ್ಮರಾಯನಿಗೆ ಸಂದಿಗೊಪ್ಪ ಕೂಡದೆಂದು ತಿಳಿಹೇಳುತ್ತಾಳೆ. ಉದಾ– ಕೃಷ್ಣ ಸಂಧಾನದ ಸಂದರ್ಭದಲ್ಲಿ ದ್ರೌಪದಿಯ ನಾದವೈಖರಿಯನ್ನು ಉಲ್ಲೇಖಿಸಬಹುದು. ಅಂತಿಮವಾಗಿ ಭೀಮನಲ್ಲಿ ತನ್ನಂತರಾಳದ ಭಾವನೆ ಸಮರ್ಥವಾಗಿ ನಿವೇದಿಸಿ ಅವನಲ್ಲಿ ಅರ್ಥೈಹಿಸಿ ದುರ್ಯೋಧನನ ತೊಡೆ ಮುರಿಸುವಲ್ಲಿ ಯಶಸ್ವಿಯಾಗುತ್ತಾಳೆ. "ದೇವಾಸುರ ಯುದ್ಧಕ್ಕೆ ಕರಗಂಬೊತ್ತೆಂಬಂತಿರುವ ಎರಡನೆಯ ಹಿಡಿಂಬಿಯಾದ ರನ್ನನ ದ್ರೌಪದಿಯೂ ಪಂಪನ ಜಾಡಿನಲ್ಲಿಯೇ ಬೆಳೆದ ಪಾತ್ರ"[2]

ಮಹಾಭಾರತದಲ್ಲಿ ಬರುವ ಮುನಿಶ್ರೇಷ್ಠರು ತಪಸ್ವಿಗಳೂ, ಕರುಣಾಮಯಿಗಳು, ಜ್ಞಾನಿಗಳೂ, ಆಗಿರುವಂತವರು. ಪುರುಷಪ್ರಧಾನ ಸಮಾಜದ ಪ್ರತೀಕಗಳೆಂಬಂತೆ ಇಲ್ಲಿನ ಮುನಿಶ್ರೇಷ್ಠರ ಪಾತ್ರ ಚಿತ್ರಣವಿರುವುದನ್ನು ಕಾಣುತ್ತೇವೆ. ಅತ್ರಿಮಹರ್ಷಿ, ಜಮದಗ್ನಿ, ಪರಾಷಮುನಿ, ವಿಶ್ವಾಮಿತ್ರ, ಗೌತಮಮುಂತಾದವರೆಲ್ಲಾ ಸ್ತ್ರೀ ಶೋಷಕರೆ. "ಹೆಣ್ಣನ್ನು ಸಾಮಾಜಿಕ ಶೃಂಖಲೆಯಲ್ಲಿಟ್ಟು ನೋಡುತ್ತದೆ ಭಾರತೀಯ ಮನಸ್ಸು ಎಂಬುದಕ್ಕೆ ಇದುವರೆಗೆ ಹೆಣ್ಣನ್ನು ನೆಡೆಸಿಕೊಂಡಿರುವ ಮಹರ್ಷಿಗಳ ಕಥೆಗಳೇ ನಿದರ್ಶನಗಳಾಗಿವೆ. ಹೆಣ್ಣು ಪುರುಷನ ಸೇವೆಗೇ ಇರುವವಳು. ಪುರುಷನು

[1] ಬರಗೂರು ರಾಮಚಂದ್ರಪ್ಪ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ. ಪು.58.

[2] ಅದೇ. ಪು. 62

ಅವಳನ್ನು ರಕ್ಷಿಸುತ್ತಾನೆ. ಆಕೆಗೆ ಯಾವುದೇ ಸ್ವಾತಂತ್ರ್ಯವಿಲ್ಲ. ಪುರುಷನ ಅಲಕ್ಷ್ಯಕ್ಕೆ ಒಳಗಾದರೆ ಶಿಕ್ಷೆ ಅಥವ ಸಾವು. ಸದಾ ಆತನ ಅನುಕಂಪೆಯಲ್ಲಿಯೇ ಸ್ತ್ರೀ ಇರಬೇಕು ಎಂಬ ಅನಾರೋಗ್ಯಕರ ಬೆಳವಣಿಗೆಯೇ ಇದಾಗಿದೆ." ಎಂಬ ಹಾಲತಿ ಸೋಮಶೇಖರ್ ರವರ ಮಾತುಗಳು ಅಕ್ಷರಶ: ಸತ್ಯವೆನಿಸುತ್ತದೆ.

ಪಾಂಡವರು–ಕೌರವರ ಜನ್ಮ ವೃತ್ತಾಂತದ ಹಿನ್ನೆಲೆಯಲ್ಲಿಯೂ ಶೋಷಣೆಗೆ ಒಳಗಾಗುವವರು ಸ್ತ್ರೀಯರೆ. ಸಂತ ಮಹಾರಾಜನ ಮಹಾರಾಜನ ಮಕ್ಕಾಳಾದ ವಿಚಿತ್ರವೀರ್ಯ ಮತ್ತು ಚಿತ್ರಾಂಗದರ ಮರಣಾ ನಂತರ ಅಂಬಿಕೆ ಮತ್ತು ಅಂಬಾಲಿಕೆ ಅತ್ತೆಯಾದ ಮತ್ಸಗಂಧಿಯ ಮಾತಿನಂತೆ ವ್ಯಾಸ (ಮತ್ಸಗಂಧಿಯ ಮೊದಲ ಮಗ) ಮಹರ್ಷಿಯನ್ನು ನಿಯೋಗ ಪದ್ಧತಿಯ

ಮೂಲಕ ಕೂಡುತ್ತಾರೆ. ಮನಸೊಪ್ಪದ ಸ್ಥಿತಿಯಲ್ಲಿ ಕಣ್ಣು ಮುಚ್ಚಿಕ್ಕೊಂಡು ವ್ಯಾಸನನ್ನು ಸೇರಿದ ಕಾರಣದಿಂದಾಗಿ ಅಂಬಿಕೆ ಕುರುಡ ದೃತರಾಷ್ಟನಿಗೆ ಜನ್ಮ ನೀಡುತ್ತಾಳೆ. ಅಸಹ್ಯದಿಂದ ಬಿಳಿಚಿಕೊಂಡು ವ್ಯಾಸನನ್ನು ಸೇರಿದ ಕಾರಣದಿಂದಾಗಿ ಅಂಬಾಲಿಕೆಗೆ ಬಿಳುಪು ರೋಗಪೀಡಿತನಾದ ಪಾಂಡು ಹುಟ್ಟುತ್ತಾನೆ. ಇಲ್ಲಿ ಗಮನಿಸಬೇಕಾದ ಅಂಶವೆನೆಂದರೆ ಪುರುಷನ ಈ ಹುಟ್ಟಿಗೆ ಸ್ತ್ರೀಯರೇ ಕಾರಣವೆನ್ನುತ್ತದೆ ನಮ್ಮ ಮಹಾಕಾವ್ಯ. ಪತಿವ್ರತೆಯ ಪರಿಕಲ್ಪನೆಯನ್ನು ಹುಟ್ಟು ಹಾಕಿದ ಸಾಮಾಜಿಕ ಸಂಸ್ಕೃತಿಯ ಪುರುಷ ಸಮಾಜವೆ 'ನಿಯೋಗ ಪದ್ಧತಿ'ಯ ಎಂಬ ವ್ಯಭಿಚಾರಕ್ಕೆ ಹೆಣ್ಣನ್ನು ಪ್ರೋತ್ಸಾಹಿಸುವುದರೊಟ್ಟಿಗೆ ಆ ಕ್ರಿಯೆಗೆ ಹೆಣ್ಣನ್ನ ಬಲಿಪಶುವಾಗಿ ಮಾಡಿದೆ. ಭಾರತೀಯರ ಮನದಾಳದಲ್ಲಿ ಪೂಜ್ಯ ಸ್ಥಾನದಲ್ಲಿರುವ ಈ ಮಹಾಕಾವ್ಯಗಳು ಹೆಣ್ಣನ್ನು ಪುರುಷಾಧೀನವಾಗಿ ಕಂಡಿರುವುದು ಶೋಚನೀಯವೇ ಸರಿಯೆನಿಸುತ್ತದೆ.

ಪರಾಮರ್ಶನ ಗ್ರಂಥಗಳು

- ಧರಣಿದೇವಿ ಮಾಲಗತ್ತಿ. *ಸ್ತ್ರೀ ವಾದ ಮತ್ತು ಭಾರತೀಯತೆ.*
- ಹಾಲತಿ ಸೋಮಶೇಖರ್. *ಮಹಿಳಾ ಚಳುವಳಿ.*
- ಪ್ರಭಾವತಿ, ಎಸ್. ಎ. *ಕನ್ನಡ ಸಾಹಿತ್ಯದಲ್ಲಿ ದ್ರೌಪದಿ.*
- ರಾಮಚಂದ್ರಪ್ಪ, ಬರಗೂರು. *ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ.*
- ಶೇಷಗಿರಿರಾವ್, ಎಲ್. ಎಸ್. *ಭಾರತೀಯ ಸಾಹಿತ್ಯ ಸಮೀಕ್ಷೆ.*
- ತಿಪ್ಪೇಸ್ವಾಮಿ, ಜಿ. ಆರ್. (ಸಂ.). (2000). *ವಿಚಾರ ಸಾಹಿತ್ಯ.*